ಶನಿವಾರ,23 ಡಿಸೆಂಬರ್ 2017, ಮಂಗಳೂರು www.mobilevk.com www.vijaykarnataka.com ವಿಜಯ ಕರ್ನಾಟಕ VK

# ಬಿಳಿ ಕೀಟ ನಿಯಂತ್ರಣ ಆತಂಕ ಬೇಡ: ಡಾ. ಚೌಡಪ್ಪ

**ವಿಕ ಸುದ್ದಿಲೋಕ** ಕಾಸರಗೋಡು

ತೆಂಗಿನ ಮರಗಳಿಗೆ ತಗಲುವ ಬಿಳಿ ಕೀಟ (ರುಗೋಸ್ ಸ್ಪಿರಲಿಂಗ್ ವೈಟ್‌ಫ್ಲೈ) ಬಾಧೆ ನಿಯಂತ್ರಣದಲ್ಲಿದೆ. ಕೃಷಿಕರು ಆತಂಕಪಡುವ ಅಗತ್ಯ ಇಲ್ಲ ಎಂದು ಕೇಂದ್ರೀಯ ತೋಟ ಬೆಳೆಗಳ ಸಂಶೋಧನಾ ಕೇಂದ್ರ (ಸಿಪಿಸಿಆರ್‌ಐ) ನಿರ್ದೇಶಕ ಡಾ. ಪಿ.ಚೌಡಪ್ಪ ಹೇಳಿದರು.



ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನೈಸರ್ಗಿಕವಾಗಿ ಈಗಾಗಲೇ ಬಿಳಿಕೀಟ ನಿಯಂತ್ರಣದಲ್ಲಿದೆ.ಮಾತ್ರವಲ್ಲದೇ ಹೆಚ್ಚು ಬಾಧಿಸಿರುವ ಪ್ರದೇಶಗಳಲ್ಲಿ ಅವುಗಳನ್ನು ನಿಯಂತ್ರಿಸುವುದಕ್ಕಾಗಿ ಮಿತ್ರ ಕೀಟಗಳನ್ನು ಸಿಪಿಸಿಆರ್‌ಐ ಅಭಿವೃದ್ಧಿಪಡಿಸಿದೆ ಎಂದು ಅವರು ಹೇಳಿದರು. ಇದನ್ನು ಕೃಷಿಕರಿಗೆ ಪ್ರಯೋಜನವಾಗುವ ರೀತಿಯಲ್ಲಿ ಉಪಯೋಗಿಸುವುದಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯಗಳ ಸಹಾಯವನ್ನು ಪಡೆಯುವುದಕ್ಕಾಗಿ ಅವರು ಹೇಳಿದರು.

ಬಿಳಿ ಕೀಟಗಳ ನಿಯಂತ್ರಣಕ್ಕಾಗಿ ಕೃಷಿಕರು ಕೀಟನಾಶಕಗಳನ್ನು ಪ್ರಯೋಗಿಸಬಾರದು. ಕೀಟನಾಶಕಗಳ ಉಪಯೋಗದಿಂದ ನೈಸರ್ಗಿಕವಾಗಿ ತೆಂಗಿನಲ್ಲಿರುವ ಮಿತ್ರ ಕೀಟಗಳು ನಾಶವಾಗುವುದಕ್ಕೆ ಕಾರಣವಾಗುವುದು. ಅಲ್ಲದೇ ಮತ್ತಷ್ಟು ಬಿಳಿಕೀಟಗಳ ಹಾವಳಿ ಹೆಚ್ಚಾಗುವ ಸಾಧ್ಯತೆಯೂ ಇದೆ ಎಂದು ಅವರು ಹೇಳಿದರು.

ಬಿಳಿ ಕೀಟವು ಹೆಚ್ಚಾಗಿ ಕೆಂದಾಳೆ ತೆಂಗಿನ ಮರಗಳಲ್ಲಿ ಕಾಣಿಸಿಕೊಳ್ಳುವುದು.ಗಿಡ್ಡ ಮರಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ. ಎತ್ತರದ ಮರಗಳಲ್ಲಿ ಅಷ್ಟು ಬಾಧಿಸುವುದಿಲ್ಲ. ಮಡಲಿನ ರಸವನ್ನು ಹೀರಿಕೊಂಡು ಅವುಗಳು ಬೆಳೆಯುವುದು. ಮಡಲಿನ ಅಡಿಭಾಗದಲ್ಲಿ ವೃತ್ತಕಾರದಲ್ಲಿ ಆವರಣ ಸೃಷ್ಟಿಸುತ್ತದೆ. ಇದೊಂದು ವಿಶಿಷ್ಟ ರೀತಿಯಲ್ಲಿ ಶಿಲೀಂಧ್ರವಾಗಿದೆ. ಮಡಲಿನ ರಸವನ್ನು ಹೀರಿಕೊಂಡಾಗ ದ್ಯುತಿ ಸಂಶ್ಲೇಷಣೆ ನಡೆಯುವುದಿಲ್ಲ, ಹೀಗಾಗಿ ಮಡಲಿನ ಮೇಲ್ಭಾಗ ಕಪ್ಪಾಗಿ ಕಾಣಿಸಿಕೊಳ್ಳುತ್ತದೆ. ಅಲ್ಲದೇ ಸಸಿಗಳಿಗೂ, ಫಲಗಳಿಗೂ ಬಾಧಿಸುವುದು ಎಂದರು.

ಸಿಪಿಸಿಆರ್‌ಐ ಕೃಷಿ ವಿಜ್ಞಾನ ಕೇಂದ್ರದಲ್ಲಿ ಬಿಳಿ ಕೀಟಗಳನ್ನು ನಿಯಂತ್ರಿಸುವುದಕ್ಕಾಗಿಯೇ ಎನ್ಕಾರ್ಸಿಯ ಗುಡೆಲೋಪೇ ಮಿತ್ರಕೀಟ ಅಭಿವೃದ್ಧಿಯನ್ನು ಮಾಡಲಾಗಿದೆ. ಬಿಳಿ ಕೀಟಗಳು ಕಾಣಿಸಿಕೊಂಡ ಪ್ರದೇಶಗಳಲ್ಲಿ ಇವುಗಳನ್ನು ಬಿಟ್ಟರೆ ಸಂಪೂರ್ಣವಾಗಿ ಹತೋಟಿಗೆ ತರಬಹುದಾಗಿದೆ ಎಂದು ಮಾಹಿತಿ ನೀಡಿದರು.

ಸಿಪಿಸಿಆರ್‌ಐ-ಐಸಿಎಆರ್ ಇದರ ಬಗ್ಗೆ ತಿಳುವಳಿಕಾ ಅಭಿಯಾನವನ್ನು ಸಹ ಆರಂಭಿಸಲಾಗಿದೆ. ಈ ಮೂಲಕ ಕೃಷಿಕರಲ್ಲಿ ಜಾಗೃತಿ ಮೂಡಿಸುವುದು. ಕೃಷಿಕರಿಗೆ ಕೀಟಗಳ ಬಗ್ಗೆ ತಿಳಿದುಕೊಳ್ಳುವ ಹಾಗೂ ಅವುಗಳ ಕಾರ್ಯವೈಖರಿಗಳ ಕುರಿತು ತರಗತಿಗಳನ್ನು ಏರ್ಪಡಿಸುವ ಮೂಲಕವೂ ಜಾಗೃತಿ ನೀಡಲಾಗುವುದು. ಇವುಗಳನ್ನು ಫಲಪ್ರದವಾಗಿ ಎದುರಿಸಲು ಕ್ರಮಗಳನ್ನು ಕೈಗೊಂಡಿರುವುದಾಗಿ ಡಾ. ಪಿ.ಚೌಡಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಿಪಿಸಿಆರ್‌ಐ ವಿಜ್ಞಾನಿಗಳಾದ ಡಾ. ಕೆ.ಮುರಳೀಧರನ್, ಡಾ. ಪಿ.ಎಸ್.ಪ್ರತಿಭಾ, ಡಾ. ರಾಮ ಪ್ರಸಾದ್ ಉಪಸ್ಥಿತರಿದ್ದರು.